THE CONSTITUTION OF INDIA

# ಭಾರತೀಯರಾದ ನಾವು

## ನಮ್ಮ ಸಂವಿಧಾನದ ರಕ್ಷಣೆಗೆ ಬದ್ಧರಾಗಿದ್ದೇವೆ. ನಮ್ಮ ಸಂವಿಧಾನ ಮತ್ತು ಕಾನೂನು ನಮಗೆ ಪೌರತ್ವ ನೀಡಿವೆ.

ಪೌರತ್ವ ತಿದ್ದುಪಡಿ ಕಾಯಿದೆ, 2019 ಹಾಗೂ ರಾಷ್ಟ್ರೀಯ ಪೌರತ್ವ ನೋಂದಣಿ ಕ್ರಮಗಳು ಧರ್ಮದ ಆಧಾರದ ಮೇಲೆ ಭಾರತವನ್ನು ಒಡೆಯುವ ಕುತಂತ್ರಗಳಾಗಿವೆ. ಇವು ಸಂವಿಧಾನ ವಿರೋಧಿಯಾಗಿವೆ. ನಮ್ಮ ಪೌರತ್ವವನ್ನು ಪ್ರಶ್ನಿಸುವ ಇಂತಹ ಯಾವುದೇ ಕ್ರಮವನ್ನು ವಿರೋಧಿಸುತ್ತೇವೆ. ನಮ್ಮ ಉಸಿರು ಇರುವವರೆಗೂ ಸಂವಿಧಾನವನ್ನು ಮತ್ತು ಈ ನೆಲದ ಕಾನೂನನ್ನು ರಕ್ಷಿಸಲು ಹೋರಾಡುತ್ತೇವೆ.

ಭಾರತದ ರಾಷ್ಟ್ರೀಯತೆ ಮತ್ತು ಪೌರತ್ವದ ಪರಿಕಲ್ಪನೆಗಳಿಗೆ ಸಂವಿಧಾನವು ಒದಗಿಸಿರುವ ಅಡಿಪಾಯವನ್ನೇ ಕಿತ್ತೆಸೆಯುವಂತಹ ಪ್ರಯತ್ನಗಳು ಕಳೆದ ಆರು ವರ್ಷಗಳಿಂದ ಸತತವಾಗಿ ನಡೆಯುತ್ತಲೇ ಇವೆ. ಸಂಸತ್ತಿನಲ್ಲಿ ವಿವರವಾದ ಚರ್ಚೆಗೆ ಅವಕಾಶವನ್ನೇ ಕೊಡದೆ, ಕೇವಲ ಸಂಖ್ಯೆಯ ಆಧಾರದ ಮೇಲೆ ಅನುಮೋದನೆಯಾದ ಮಸೂದೆಗೆ ತರಾತುರಿಯಲ್ಲಿ ರಾಷ್ಟ್ರಪತಿಗಳ ಅಂಕಿತವನ್ನೂ ಪಡೆಯಲಾಗಿದೆ. ಇದಕ್ಕೆ ಪೂರಕವಾಗಿ ಇಡೀ ದೇಶದಲ್ಲಿ ರಾಷ್ಟ್ರೀಯ ಪೌರತ್ವ ನೋಂದಣಿ ನಡೆಸಲೂ ಅನುಮತಿಯನ್ನು ಪಡೆಯಲಾಗಿದೆ. ಇವೆರಡೂ ಸಂವಿಧಾನದ ಮೌಲ್ಯಗಳ ಮೇಲಿನ ಹಲ್ಲೆಯಾಗಿದೆ.

ಅಸ್ಸಾಂನ ಜನರು ದಶಕಗಳಿಂದ ತಮ್ಮ ಪೌರತ್ವದ ಮೇಲೆ ನಡೆಯುತ್ತಿರುವ ಹಲ್ಲೆಯಿಂದಾಗಿ ನಲುಗಿ ಹೋಗಿದ್ದಾರೆ. ಒಂದು ಕಾಯಿದೆಯ ಮೂಲಕ ಒಂದು ಗುಂಪಿನ ಜನರನ್ನು ರಕ್ಷಿಸುವುದಾಗಿ ಹೇಳುತ್ತಿರುವ ಸರ್ಕಾರವು, ಮುಸ್ಲಿಮರನ್ನು ರಾಷ್ಟ್ರೀಯ ಪೌರತ್ವ ನೋದಣಿಯಿಂದ ಹೊರಗಿಟ್ಟು, ಅವರನ್ನು 'ಅನ್ಯರನ್ನಾಗಿ' ಮಾಡುವ ಗುರಿ ಹೊಂದಿದೆ.

ಆದರೆ, ಈ ನೋಂದಣಿ ಪ್ರಕ್ರಿಯೆಯಿಂದ ಕೇವಲ ಮುಸ್ಲಿಮರಷ್ಟೇ ಅಲ್ಲ, ಬಹುತೇಕ ಭಾರತೀಯರೂ ಅನಿಯಮಿತ ಕಷ್ಟಗಳಿಗೆ ಗುರಿಯಾಗಲಿದ್ದಾರೆ. ಅದರಲ್ಲೂ ಮುಖ್ಯವಾಗಿ ವಲಸೆ ಕಾರ್ಮಿಕರು, ಸಣ್ಣ ರೈತರು, ಆದಿವಾಸಿಗಳು, ಅರಣ್ಯವಾಸಿಗಳು, ದಲಿತರು, ಬಹುಜನರು, ಅಲೆಮಾರಿ ಸಮುದಾಯಗಳು, ಈ ಅಸಾಂವಿಧಾನಿಕ ಕ್ರಮಕ್ಕೆ ಬಲಿಯಾಗಲಿದ್ದಾರೆ. ಅಭಿವೃದ್ಧಿ ಯೋಜನೆಗಳು, ಮಾನವ ನಿರ್ಮಿತ ಗಲಭೆ-ಹತ್ಯಾಕಾಂಡಗಳು, ನೈಸರ್ಗಿಕ ಪ್ರಕೋಪಗಳಾದ ನೆರೆ-ಬೆಂಕಿ ಅನಾಹುತ-ಭೂಕಂಪ ಮೊದಲಾದ ಕಾರಣಗಳಿಂದ ಸ್ಥಳಾಂತರಗೊಂಡಿರುವ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಇರುವ ಲಕ್ಷಾಂತರ ಕೋಟ್ಯಂತರ ಜನರು ತಮ್ಮ ಹುಟ್ಟು, ಹುಟ್ಟಿದೂರು, ಹುಟ್ಟಿದ ಮನೆಗೆ ಸಂಬಂಧಿಸಿದ ಮೂಲ ದಾಖಲೆಗಳಿಲ್ಲದೆ ಕಷ್ಟಕ್ಕೆ ಸಿಲುಕುತ್ತಾರೆ.

## ಪೌರತ್ವ ತಿದ್ದುಪಡಿ ಕಾಯಿದೆಯನ್ನು ರದ್ದುಪಡಿಸಿ. ರಾಷ್ಟ್ರೀಯ ಪೌರತ್ವ ನೋಂದಣಿಯನ್ನು ಸ್ಥಗಿತಗೊಳಿಸಿ.

### ಏನಿದು ಪೌರತ್ವ ತಿದ್ದುಪಡಿ ಕಾಯಿದೆ, 2019?

ಸಂವಿಧಾನದ 11ನೇ ಪರಿಚ್ಛೇದದ ಅಡಿಯಲ್ಲಿ ಬರುವ 1955ರ ಪೌರತ್ವ ಕಾಯಿದೆಯು ಹುಟ್ಟು, ಸಹಜತೆ, ನೋಂದಣಿ ಮತ್ತು ಅಡಕ ಎಂಬ ಕ್ರಮಗಳ ಮೂಲಕ ಯಾವುದೇ ವ್ಯಕ್ತಿಗೆ ಪೌರತ್ವವನ್ನು ನೀಡುತ್ತದೆ. ಭಾರತದ ಪ್ರಜೆ ಎಂದು ಗುರುತಿಸುತ್ತದೆ.

ಈ ಕಾಯಿದೆಯ ಅನುಸಾರ 1950ರಿಂದ 1987ರ ಅವಧಿಯೊಳಗೆ ಭಾರತದಲ್ಲಿ ಜನಿಸಿರುವ ಪ್ರತಿ ವ್ಯಕ್ತಿ ಸಹಜವಾಗಿ ಭಾರತದ ಪ್ರಜೆಯಾಗುತ್ತಾರೆ; 1987ರ ನಂತರ ಜನಿಸಿದ ವ್ಯಕ್ತಿಯ ತಂದೆ ಅಥವಾ ತಾಯಿ, ಇಬ್ಬರಲ್ಲಿ ಒಬ್ಬರು ಭಾರತೀಯರಾಗಿದ್ದರೆ, ಅವರಿಗೆ ಪೌರತ್ವ ದೊರೆಯುತ್ತದೆ; 2004ರ ನಂತರ ಜನಿಸಿದ ವ್ಯಕ್ತಿಯ ಒಬ್ಬ ಪೋಷಕರು ಭಾರತದ ಪ್ರಜೆಯಾಗಿರಬೇಕು ಹಾಗೂ ಮತ್ತೊಬ್ಬ ಪೋಷಕರು ಅಕ್ರಮ ವಲಸಿಗರಾಗಿರಬಾರದು. ಸಂವಿಧಾನವು ಯಾವುದೇ ವ್ಯಕ್ತಿಗೆ ಪೌರತ್ವ ನೀಡಲು ಧರ್ಮದ ಆಧಾರದಲ್ಲಿ ತಾರತಮ್ಯ ಮಾಡುವುದಿಲ್ಲ.

ಈಗ 2019ರ ಪೌರತ್ವ ತಿದ್ದುಪಡಿ ಕಾಯಿದೆಯು, ಪಾಕಿಸ್ತಾನ, ಅಫಘಾನಿಸ್ಥಾನ ಮತ್ತು ಬಾಂಗ್ಲಾದೇಶಗಳಿಂದ ಹೊರದೂಡಲ್ಪಟ್ಟು, ಭಾರತಕ್ಕೆ ಬಂದು ನೆಲೆಸಿರುವ ಹಿಂದು, ಸಿಖ್, ಬೌದ್ಧ, ಜೈನ, ಪಾರ್ಸಿ ಹಾಗೂ ಕ್ರೈಸ್ತ ಧರ್ಮೀಯರಿಗೆ ಭಾರತದಲ್ಲಿ ಆಶ್ರಯ ನೀಡಲು ಹಾಗೂ ಪೌರತ್ವ ನೀಡಲು ಅನುವು ಮಾಡಿಕೊಡುತ್ತದೆ.

ಇವರು 2014ಕ್ಕೆ ಮೊದಲು ಭಾರತದಲ್ಲಿ ಬಂದು ನೆಲೆಸಿದ್ದರೆ ಈ ಸೌಲಭ್ಯ ದೊರೆಯುತ್ತದೆ.

ಪಾಕಿಸ್ಥಾನದಿಂದ ಹೊರದೂಡಲಾದ ಅಹಮ್ಮದೀಯರು, ಸೂಫಿಗಳು ಹಾಗೂ ರಾಜಕೀಯ ಭಿನ್ನಮತೀಯರನ್ನು ಈ ಕಾಯಿದೆಯ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಹಾಗೂ ರಾಜಕೀಯ ಭಿನ್ನಮತೀಯರಾದ, ಆಶ್ರಯ ಕೋರಿ ಭಾರತಕ್ಕೆ ಬಂದಿರುವ ಮ್ಯಾನ್ಮಾರ್ ದೇಶದ ರೋಹಿಂಗ್ಯಾಗಳು ಮತ್ತು ಶ್ರೀಲಂಕಾದ ತಮಿಳರಿಗೂ ಈ ಕಾಯಿದೆ ಸ್ಥಾನ ಒದಗಿಸುವುದಿಲ್ಲ.

ಸ್ವತಂತ್ರ ಭಾರತದಲ್ಲಿ ಇದೇ ಮೊದಲ ಬಾರಿಗೆ ಅಧಿಕೃತವಾಗಿ ಕೆಲವು ಧರ್ಮೀಯರನ್ನು ಎತ್ತಿಹಿಡಿಯುವುದರ ಜೊತೆಗೆ ಮುಸ್ಲಿಂ ಧರ್ಮದವರನ್ನು ಅನ್ಯರನ್ನಾಗಿಸಿ, ಅವರನ್ನು ಎರಡನೇ ದರ್ಜೆಗೆ ಇಳಿಸಲಾಗಿದೆ. ಇದು ಸಂವಿಧಾನದ ಧರ್ಮನಿರಪೇಕ್ಷತೆಯ ತತ್ವದ ಉಲ್ಲಂಘನೆಯಾಗಿದೆ. ಹಾಗೂ 13, 14, 15, 16 ಮತ್ತು 21ನೇ ಪರಿಚ್ಛೇದಗಳು ಕೊಡಮಾಡಿರುವ ಸಮಾನತೆಯ ಹಕ್ಕನ್ನು, ಧರ್ಮದ ಆಧಾರದ ಮೇಲೆ ತಾರತಮ್ಯ ಮಾಡಬಾರದು ಎಂಬ ನಿರ್ದೇಶನವನ್ನು ಉಲ್ಲಂಘಿಸುತ್ತದೆ. ಈ ಕಾಯಿದೆಯು ಹಿಂದಿ, ಮರಾಠಿ, ಗುಜರಾತಿ ಅಥವಾ ತಮಿಳು ಇತ್ಯಾದಿ ಭಾಷೆಗಳನ್ನು ಮಾತನಾಡುವ ಹಿಂದೂ ನಿರಾಶ್ರಿತರಿಗೂ ಪೌರತ್ವ ನೀಡುವುದು ಸಂಶಯಾಸ್ಪದವಾಗಿದೆ. ಯಾಕೆಂದರೆ, ಈ ಬೇರೆ ಬೇರೆ ಭಾಷೆಗಳನ್ನು ಮಾತನಾಡುವ ನಿರಾಶ್ರಿತರು ತಾವು ಪಾಕಿಸ್ಥಾನ ಅಥವಾ ಅಫಘಾನಿಸ್ಥಾನ ಇಲ್ಲವೇ ಬಾಂಗ್ಲಾದೇಶದಿಂದ ವಲಸೆ ಬಂದಿರುವುದನ್ನು ರುಜುವಾತು ಮಾಡುವುದು ಹೇಗೆ?

## ರಾಷ್ಟ್ರೀಯ ಪೌರತ್ವ ನೋಂದಣಿ: ಅಸ್ಸಾಂ ಅನುಭವ

100 ವರ್ಷಗಳಿಗೂ ಹಿಂದೆ ಬ್ರಿಟೀಷರು ಅಸ್ಸಾಂನ ಕಾಡುಗಳನ್ನು ಕಡೆದು, ಭೂಮಿಯನ್ನು ಕೃಷಿ ಮಾಡುವ ಸಲುವಾಗಿ ಬಂಗಾಲದ ಬಡ ಕಾರ್ಮಿಕರನ್ನು ಕರೆತರುವುದರೊಂದಿಗೆ ಅಲ್ಲಿ ಸ್ಥಳೀಯರು ಮತ್ತು 'ಹೊರಗಿನವರು' ಎಂಬ ಸಮಸ್ಯೆ ಆರಂಭವಾಯಿತು. ತಮ್ಮ ಕೆಲಸ ಮಾಡಿಸಿಕೊಳ್ಳುವ ಸಲುವಾಗಿ ಜನರನ್ನು ಒಡೆದು ಆಳುತ್ತಿದ್ದ ಬ್ರಿಟೀಷರು, ಅಸ್ಸಾಂನ ಮೂಲ ನಿವಾಸಿಗಳು ಮತ್ತು ಬಂಗಾಲದ ಜನರ ನಡುವೆ ತಾರತಮ್ಯ ಮಾಡುವ ಮೂಲಕ ಪರಿಸ್ಥಿತಿಯನ್ನು ಮತ್ತಷ್ಟು ಉದ್ವಿಗ್ನಗೊಳಿಸಿದ್ದರು. ಈ ತಾರತಮ್ಯವು ಬೃಹತ್ ಪ್ರತಿಭಟನೆಗಳಿಗೆ, ಹಿಂಸಾಚಾರಕ್ಕೆ ಕಾರಣವಾಗಿ, ಪ್ರತಿಬಾರಿಯೂ 'ಹೊರಗಿನವರನ್ನು' ಅಧಿಕೃತವಾಗಿ ಗುರುತಿಸುವ ನೋಂದಣಿ ಪ್ರಕ್ರಿಯೆಯಲ್ಲಿ ಕೊನೆಯಾಗುತ್ತಿತ್ತು. ಹೀಗೆ 1951ರಲ್ಲಿ ಅಸ್ಸಾಂನಲ್ಲಿ ಮೊದಲ ಬಾರಿಗೆ ಈ ಪೌರತ್ವ ನೋಂದಣಿ ಪ್ರಕ್ರಿಯೆಯನ್ನು ಮಾಡಲಾಯಿತು.

ಜನಸಂಖ್ಯೆ ಮಾಹಿತಿಯನ್ನು ಆಧರಿಸಿ ಸಿದ್ಧಪಡಿಸಿದ್ದ ಆ ಪಟ್ಟಿಯು ಅಸ್ಸಾಂನ ಭಾಷಾ ಅಲ್ಪಸಂಖ್ಯಾತರು ಮತ್ತು ಧಾರ್ಮಿಕ ಅಲ್ಪಸಂಖ್ಯಾತರನ್ನು ದಶಕಗಳ ಕಾಲ ಭೀತಿಗೆ ದೂಡಿತು. ತಮ್ಮನ್ನು 'ಹೊರಗಿನವರು', 'ಅನ್ಯರು', 'ವಿದೇಶೀಯರು', 'ಅಕ್ರಮ ವಲಸಿಗರು' ಎನ್ನಬಹುದು ಎಂದು ಆತಂಕಿತರಾಗಿದ್ದರು.

ಸುಮಾರು ವರ್ಷಗಳ ಹಿಂಸಾತ್ಮಕ ಚಳವಳಿಗಳು ಮತ್ತು ಸಾವಿರಾರು ಜನರ ಹತ್ಯೆಯ ನಂತರ 1985ರಲ್ಲಿ ಅಸ್ಸಾಂ ಒಪ್ಪಂದ ಜಾರಿಗೆ ಬಂದಿತು. ಅದರ ಅನ್ವಯ ಮತ್ತೆ ರಾಷ್ಟ್ರೀಯ ಪೌರತ್ವ ನೋಂದಣಿಯನ್ನು ಆರಂಭಿಸಲಾಯಿತು. ಈ ಕ್ರಮವು ಭಾರತೀಯರನ್ನು, ಅಸ್ಸಾಮಿಗಳನ್ನು ಹಾಗೂ ಹೊರಗಿನವರನ್ನು ಸ್ಪಷ್ಟವಾಗಿ ಗುರುತಿಸಿ, ಎಲ್ಲವನ್ನೂ ಒಂದು ಸಲ ಸ್ವಚ್ಛಗೊಳಿಸಿಬಿಡುತ್ತದೆ, ಆಗ ಶಾಂತಿ ನೆಲೆಸುತ್ತದೆ ಎಂದು ಭಾವಿಸಲಾಗಿತ್ತು. ಸರ್ವೋಚ್ಚ ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ನಡೆದ ಈ ನೋಂದಣಿ ಪ್ರಕ್ರಿಯೆಗೆ ಮುನ್ನ ವಿದ್ಯಾರ್ಥಿಗಳು, ನಾಗರಿಕರು ಹಾಗೂ ರಾಜಕೀಯ ಪಕ್ಷಗಳ ಅಭಿಪ್ರಾಯವನ್ನು ಪಡೆಯಲಾಗಿತ್ತು. ಅದರಂತೆ ಯಾವ ಯಾವ ದಾಖಲೆಗಳನ್ನು ಅಧಿಕೃತ ಗುರುತಿನ ಚೀಟಿ ಎಂದು ಪರಿಗಣಿಸಬೇಕು, ಯಾವ ಮಾದರಿಯಲ್ಲಿ ನೋಂದಣಿ ಪ್ರಕ್ರಿಯೆಯನ್ನು ನಡೆಸಬೇಕು ಎನ್ನುವುದನ್ನೂ ಎಲ್ಲರ ಸಮ್ಮತಿಯಂತೆ ನಿರ್ಧರಿಸಲಾಗಿತ್ತು.

ಅಷ್ಟಾದರೂ, 2019ರ ಆಗಸ್ಟ್ 31ರಂದು ಬಿಡುಗಡೆಯಾದ ಅಂತಿಮ ಎನ್ನಾರ್ಸಿ ಪಟ್ಟಿಯು ಎಲ್ಲರಿಗೂ ಅಸಮಾಧಾನವನ್ನು ಉಂಟು ಮಾಡಿದೆ. ಈ ಪ್ರಕ್ರಿಯೆಯು "ನ್ಯಾಯಯುತ ಮತ್ತು ಅಂತರ್ಗತ"ವಾಗಿರುವುದಕ್ಕಿಂತ ಹೆಚ್ಚಾಗಿ ಅಸ್ಸಾಂನ ಜನರನ್ನು ಆಘಾತ ಮತ್ತು ಬಡತನಕ್ಕೆ ದೂಡಿದೆ. ಐದು ದೀರ್ಘ ವರ್ಷಗಳ ಅವಧಿಯಲ್ಲಿ, ಸುಮಾರು ರೂ. 1220 ಕೋಟಿ ವೆಚ್ಚದಲ್ಲಿ ನಡೆದ ನೋಂದಣಿಯ ಅಂತ್ಯದಲ್ಲಿ 19 ಲಕ್ಷ ಜನರು ಅಧಿಕೃತ ಪಟ್ಟಿಯಿಂದ ಹೊರಗೆ ಉಳಿದಿದ್ದರು. ಇದಕ್ಕೂ ಮೊದಲು, ಅರ್ಜಿ ಸಲ್ಲಿಸಿದ 3.2 ಕೋಟಿ ಜನರಲ್ಲಿ ಮೊದಲ ಹಂತದಲ್ಲಿ 1.2 ಕೋಟಿ ಜನರನ್ನು (12 ಮಿಲಿಯನ್) ನಂತರ 44ಲಕ್ಷ ಜನರನ್ನು (4.4 ಮಿಲಿಯನ್) ಪಟ್ಟಿಯಿಂದ ಹೊರಗಿಡಲಾಗಿತ್ತು. ಎಲ್ಲ ಪಾಲುದಾರರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಎನ್ನಾರ್ಸಿಯನ್ನು ಮಾಡಿದ್ದರೂ ಕೂಡ, ರಾಜಕೀಯ ಗಾಳಿ ಬದಲಾದಂತೆ, ಪ್ರಕ್ರಿಯೆಯೂ ದುರ್ಬಳಕೆಗೆ ಬಲಿಯಾಯಿತು ಇದರಿಂದಾಗಿ ಈ ಹಿಂದೆ ಒಪ್ಪಿದ ಗುರುತಿನ ದಾಖಲೆಗಳನ್ನು ತಿರಸ್ಕರಿಸಲಾಯಿತು. ಹೀಗಾಗಿ ಲಕ್ಷಾಂತರ ಭಾರತೀಯರು- ಬಂಗಾಳಿ ಹಿಂದೂಗಳು, ಗೂರ್ಖಾಗಳು, ಹಿಂದಿ ಮಾತನಾಡುವ ಜನರು, ರಾಜ್‌ಬನ್ಷಿಗಳು, ಮುಸ್ಲಿಮರು- ಎಲ್ಲರೂ ಇಂದು ಹೊರಗಿನವರಾಗಿ ಬಿಟ್ಟಿದ್ದಾರೆ.

ಸಿಟಿಜನ್ಸ್ ಫಾರ್ ಜಸ್ಟೀಸ್ ಅಂಡ್ ಪೀಸ್ (ಸಿಜೆಪಿ) ಸಂಸ್ಥೆಯು ಅಸ್ಸಾಂನಲ್ಲಿ ಈ ನೋಂದಣಿ ಪ್ರಕ್ರಿಯೆಯಲ್ಲಿ ತೊಂದರೆಗೆ ಒಳಗಾದವರಿಗೆ ಎರಡು ವರ್ಷಗಳಿಂದ ಸ್ವಯಂಸೇವಕರ ಮೂಲಕ ನೆರವು ನೀಡುತ್ತಿದೆ. ಸುಮಾರು 10 ಲಕ್ಷಕ್ಕೂ ಹೆಚ್ಚು ಜನರ ಅರ್ಜಿಗಳನ್ನು ತುಂಬಿಸಿ, ಸರಿಯಾದ ದಾಖಲೆಗಳೊಂದಿಗೆ ಸಲ್ಲಿಸಲು ನೆರವು ನೀಡುತ್ತಾ ಬರಲಾಗಿದೆ.

ಹೊರಗಿನವರು ಎಂದು ಬಂಧಿಸಿರುವವರನ್ನು ಶಿಬಿರಗಳಿಂದ ಬಿಡುಗಡೆ ಮಾಡಿಸಲು, ಮಾನಸಿಕ ತುಮುಲದಿಂದ ಆತ್ಮಹತ್ಯೆಯ ಅಂಚಿನಲ್ಲಿರುವವರಿಗೆ ಸಾಂತ್ವನ-ಚಿಕಿತ್ಸೆ ನೀಡಲು ಹಾಗೂ ಸರ್ವೋಚ್ಛ ನ್ಯಾಯಾಲಯದಲ್ಲಿ ಅರ್ಜಿಗಳನ್ನು ಸಲ್ಲಿಸಲು ಜನರಿಗೆ ಸಹಾಯ ಮಾಡಲಾಗಿದೆ.700 ಜನ ಸ್ವಯಂಸೇವಕರ ಕ್ಷೇತ್ರ ಅನುಭವಗಳನ್ನು ಆಧರಿಸಿ ನಾವೀಗ ಎನ್ನಾರ್ಸಿ ಕುರಿತು ಓದುವ ಸಾಮಗ್ರಿ ಸಿದ್ಧಪಡಿಸುತ್ತಿದ್ದೇವೆ. ಹಾಗೂ ಇಡೀ ಭಾರತದಾದ್ಯಂತ ಜನರಲ್ಲಿ ತಿಳುವಳಿಕೆ ಮೂಡಿಸಲು ಅಗತ್ಯ ತರಬೇತಿಗಳನ್ನು ನಡೆಸುತ್ತಿದ್ದೇವೆ.

## ಅಖಿಲ ಭಾರತ ರಾಷ್ಟ್ರೀಯ ಪೌರತ್ವ ನೋಂದಣಿ (ಎನ್ಆರ್ಸಿ) ಮತ್ತು ರಾಷ್ಟ್ರೀಯ ಜನಸಂಖ್ಯೆ ದಾಖಲಾತಿ (ಎನ್‌ಪಿಆರ್)

ಕೇವಲ ಒಂದೆರಡು ದಾಖಲೆಗಳ ಮೂಲಕ ಯಾರು ಭಾರತೀಯರು, ಯಾರು ಭಾರತೀಯರಲ್ಲ ಎನ್ನುವುದನ್ನು ನಿರ್ಧರಿಸುವ ಅಧಿಕಾರವನ್ನು ನಾವು ಸರ್ಕಾರಕ್ಕೆ ಮತ್ತು ಸರ್ಕಾರದ ಅಧಿಕಾರಿಗಳಿಗೆ ಒಪ್ಪಿಸಿಬಿಟ್ಟಿದ್ದೇ ಆದಲ್ಲಿ, ನಾವು ಸುದೀರ್ಘ ಕಾಲದ ಸಾಮಾಜಿಕ ಕಲಹ ಮತ್ತು ಆಘಾತಗಳಿಗೆ ಬಾಗಿಲು ತೆರೆಯುತ್ತಿದ್ದೇವೆ ಎಂದೇ ಅರ್ಥ. ಇದನ್ನು ನಾವು ಅರಿಯಬೇಕಾಗಿದೆ.

1. ಇಡೀ ಭಾರತದಲ್ಲಿ ಪೌರತ್ವ ನೋಂದಣಿ ಮಾಡುವ ಅಗತ್ಯವಿದೆಯಾ?
ಭಾರತೀಯರಿಗೆ ಗುರುತಿನ ಚೀಟಿಯಾಗಿ ಈಗಾಗಲೇ ಆಧಾರ್ ಕಾರ್ಡ್, ಅದಕ್ಕೂ ಹಿಂದಿನ ಪಡಿತರ ಚೀಟಿ, ಜೊತೆಗೆ ಮತದಾರರ ಚೀಟಿಗಳು ಹಾಗೂ ಪಾಸ್‌ಪೋರ್ಟ್ ಇವೆ. ಈ ಅಧಿಕೃತ ದಾಖಲೆಗಳು ಇಲ್ಲದಿರುವ, ವಿದೇಶೀ ಅಕ್ರಮ ವಲಸಿಗರ ಬಗ್ಗೆ ಸರ್ಕಾರದಲ್ಲಿ ಯಾವ ನಿಖರ ಮಾಹಿತಿಯೂ ಇಲ್ಲ. ಈ ಬಗ್ಗೆ ವಿಸ್ತೃತ ಅಧ್ಯಯನಗಳೂ ನಡೆದಿಲ್ಲ. ವಸ್ತುಸ್ಥಿತಿ ಹೀಗಿರುವಾಗ ರಾಷ್ಟ್ರೀಯ ಪೌರತ್ವ ನೋಂದಣಿ ನಡೆಸಲು ಬೇಕಾದ ಯಾವ ತಾತ್ವಿಕ ಆಧಾರಗಳೂ ಸರ್ಕಾರದ ಬಳಿ ಇಲ್ಲ. ಹಾಗಾಗಿ, ಇಡೀ ದೇಶದಲ್ಲಿ ಈ ಬೃಹತ್ ಪ್ರಕ್ರಿಯೆ ನಡೆಸುತ್ತೇವೆ ಎನ್ನುವುದು ಜನರನ್ನು ಮತ್ತಷ್ಟು ಕಷ್ಟಗಳಿಗೆ ದೂಡುವ ಕ್ರಿಯೆಯಾಗಿದೆ.

2. ದಾಖಲೆಗಳನ್ನು ಸಲ್ಲಿಸುವುದು ಹೇಗೆ?
ನಮ್ಮ ದೇಶದಲ್ಲಿ ದಾಖಲೆಗಳಿಗೆ ಸಂಬಂಧಿಸಿದಂತೆ ಬಹಳಷ್ಟು ಸಮಸ್ಯೆಗಳಿವೆ. ಮೊದಲನೆಯದಾಗಿ ಶೇ.58 ಜನರು ಮಾತ್ರ ತಮ್ಮ ಮನೆಯಲ್ಲಿ ಹುಟ್ಟಿದ ಮಕ್ಕಳ ಜನನ ಪ್ರಮಾಣ ಪತ್ರ ಮಾಡಿಸುತ್ತಿದ್ದಾರೆ. ಉಳಿದ ಶೇ.

42 ಮಕ್ಕಳ ದಾಖಲಾತಿಯೇ ಅಗುತ್ತಿಲ್ಲ. ಶೇ.20ರಷ್ಟು ಮಕ್ಕಳು ಎಂದಿಗೂ ಶಾಲೆಗೆ ಸೇರುವುದೇ ಇಲ್ಲ. ಹೀಗಾಗಿ ಮಕ್ಕಳ ದಾಖಲಾತಿ ಅಲ್ಲಿಯೂ ಸಿಗುವುದಿಲ್ಲ. ಹಾಗೂ ಶೇ.30ರಷ್ಟು ಜನರು ಕೆಲಸ ಅರಸಿಕೊಂಡು ರಾಜ್ಯದಿಂದ ರಾಜ್ಯಕ್ಕೆ ವಲಸೆ ಹೋಗಿದ್ದಾರೆ. ಹೋಗುತ್ತಲೇ ಇರುತ್ತಾರೆ. ಜೊತೆಗೆ ಭಾರತದಲ್ಲಿ ಸುಮಾರು 6 ಕೋಟಿ ಜನರು ಅಲೆಮಾರಿ ಸಮುದಾಯದವರು. ಇವರು ಬಡವರು ಹಾಗೂ ಸದಾ ಒಂದು ಜಾಗದಿಂದ ಮತ್ತೊಂದು ಕಡೆಗೆ ಸಂಚಾರ ಮಾಡುತ್ತಿರುತ್ತಾರೆ. ಇವರ ಬಳಿ ಯಾವ ದಾಖಲೆಗಳಿರುವುದಿಲ್ಲ. ಹಾಗೆಯೇ 10ಕೋಟಿಗೂ ಹೆಚ್ಚು ಜನರು ಬುಡಕಟ್ಟು ಜನಾಂಗದವರು. ಇವರು ಕಂದಾಯ ಹಳ್ಳಿಗಳಿಂದ ದೂರ ಇವರ ಬಳಿಯೂ ತಮ್ಮ ವಂಶಾವಳಿಗೆ ಸಂಬಂಧಿಸಿದ ದಾಖಲಾತಿಗಳು ಇರುವುದು ಅಸಾಧ. ಹಾಗಾಗಿ ಎಲ್ಲ ಭಾರತೀಯರೂ ತಮ್ಮ ಭಾರತೀಯತೆಯನ್ನು ಸಾಬೀತುಪಡಿಸಲು ನಿಖರ ದಾಖಲಾತಿಗಳನ್ನು ಸಲ್ಲಿಸುವುದು ದುಸ್ತರವಾಗಿದೆ.

3. ಕಟ್ ಆಫ್ ವರ್ಷ ಎಂದರೇನು ಮತ್ತು ಯಾವುದು ಕಟ್ ಆಫ್ ವರ್ಷ?
ಕಟ್ ಆಫ್ ವರ್ಷ ಎಂದರೆ, ಒಂದು ನಿಗಧಿತ ಇಸವಿಯ ನಂತರ ಹುಟ್ಟಿದವರು ತಾವು ಈ ದೇಶದ ಮೂಲ ನಿವಾಸಿಗಳು ಎನ್ನುವುದನ್ನು ಅವರ ಪೂರ್ವಜರ ದಾಖಲೆಗಳ ಸಹಾಯದಿಂದ ಸಾಬೀತು ಪಡಿಸಬೇಕು ಎನ್ನಲಾಗಿದೆ. ಅದಕ್ಕೆ ಮುನ್ನ ಜನಿಸಿದವರನ್ನು ಸಹಜವಾಗಿ ಪೌರರು ಎಂದು ಪರಿಗಣಿಸಲಾಗುತ್ತದೆ. ಆದರೆ, ಅವರೂ ಕೂಡ ಎನ್ನಾರ್ಸಿ ಅಡಿಯಲ್ಲಿ ದಾಖಲೆಗಳನ್ನು ಸಲ್ಲಿಸಬೇಕು.
ಅಸ್ಸಾಂನಲ್ಲಿ ಕಟ್ ಆಫ್ ವರ್ಷ 1971 ಆಗಿತ್ತು. ಈಗ ಭಾರತದಾದ್ಯಂತ ಮಾಡುವ ಎನ್ನಾರ್ಸಿಗೆ 1987 ಕಟ್ ಆಫ್ ವರ್ಷ ಎಂದು ಸರ್ಕಾರ ನಿಗಧಿಪಡಿಸಿದೆ.

4. ದೇಶಾದ್ಯಂತ ಎನ್ನಾರ್ಸಿ ಮಾಡಲು ಎಷ್ಟು ಖರ್ಚಾಗುತ್ತದೆ?
ಅಸ್ಸಾಂನಲ್ಲಿ 3.20 ಕೋಟಿ ಜನರ ಪೌರತ್ವ ನೋಂದಣಿ ಮಾಡಲು ರೂ. 1,220 ಕೋಟಿ ವೆಚ್ಚವಾಗಿದೆ. ಇದು ಸರ್ಕಾರ ಮಾಡಿರುವ ವೆಚ್ಚ ಮಾತ್ರ. ದಾಖಲೆಗಳನ್ನು ಪಡೆಯಲು, ಹೊಸತಾಗಿ ಮಾಡಿಸಲು, ಇತ್ಯಾದಿಗಳಿಗಾಗಿ ಅಸ್ಸಾಂನ ನಾಗರಿಕರು ಮಾಡಿರುವ ವೆಚ್ಚವನ್ನೂ ಸೇರಿಸಿದರೆ ಈ ಮೊತ್ತ ರೂ. 7,836 ಕೋಟಿಗೆ ತಲುಪುತ್ತದೆ. ಇದರ ಆಚೆಗೆ 19 ಲಕ್ಷ ಜನರ ದಾಖಲೆಗಳು ಸರಿ ಇಲ್ಲ ಎಂದು ಅವರನ್ನು ಮತ್ತೆ ತಪಾಸಣೆಗೆ ಒಳಪಡಿಸಲಾಗುತ್ತಿದೆ. ಅದರ ವೆಚ್ಚವೂ ಸೇರಿದರೆ ವೆಚ್ಚದ ಪ್ರಮಾಣ ಮತ್ತೂ ಹೆಚ್ಚಾಗುತ್ತದೆ.

ಇದು ಒಂದೇ ಒಂದು ರಾಜ್ಯಕ್ಕೆ ಆಗಿರುವ ವೆಚ್ಚ. ದೇಶದ ಉಳಿದ 29 ರಾಜ್ಯಗಳಿಗೆ, ಹಲವು ರಾಜ್ಯಗಳು ಅಸ್ಸಾಂನ ದುಪ್ಪಟ್ಟು ದೊಡ್ಡದಿವೆ, ಎಷ್ಟು ವೆಚ್ಚವಾಗಬಹುದು ಎನ್ನುವುದನ್ನು ಊಹಿಸಬೇಕು. ಭಾರತದ ಒಟ್ಟು ಜನಸಂಖ್ಯೆ134 ಕೋಟಿ. ಒಂದು ಸರಳ ಲೆಕ್ಕಾಚಾರದ ಪ್ರಕಾರ ಇಷ್ಟು ಜನರ ಮೊದಲ ಹಂತದ ಎನ್ಆರ್ಸಿಗೆ ರೂ. 55,000 ಕೋಟಿ ಅಗತ್ಯವಿದೆ. ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಬಜೆಟ್ ಗಾತ್ರ ರೂ. 65,000 ಕೋಟಿ. ಅಂತಹುದೊಂದು ಇಲಾಖೆಯ ಬಜೆಟ್ ಅನ್ನೇ ನುಂಗುವಂತಹ ಖರ್ಚು ಭಾರತದ ಜನರ ಮೇಲೆ ಬೀಳಲಿದೆ. ಈ ವೆಚ್ಚವನ್ನು ಸರಿದೂಗಿಸಲು ಜನರ ಮೇಲೆ ಸೆಸ್ ವಿಧಿಸಲೂ ಬಹುದು. ಆರ್ಥಿಕವಾಗಿ ಕಡುಕಷ್ಟದಲ್ಲಿ ಇರುವ ಭಾರತಕ್ಕೆ ಈ ಹೆಚ್ಚುವರಿ ಖರ್ಚು ಭರಿಸಲು ಸಾಧ್ಯವೆ?

5. ಸರ್ಕಾರವು ನಮ್ಮ ಪೌರತ್ವವನ್ನು ಪ್ರಶ್ನಿಸಬಹುದಾ?

ಈಗಾಗಲೇ ಆಧಾರ್, ಪಡಿತರ ಚೀಟಿ, ಪಾಸ್‌ಪೋರ್ಟ್, ಮತದಾರರ ಪತ್ರಗಳ ಮೂಲಕ ನಮ್ಮನ್ನು ಭಾರತೀಯರು ಎಂದು ಗುರುತಿಸಿರುವಾಗ ಮತ್ತೆ ಪೌರತ್ವ ನೋಂದಣಿ ಮಾಡುವುದು ಪ್ರಜಾಪ್ರಭುತ್ವಕ್ಕೆ ತಕ್ಕ ನಡೆಯಲ್ಲ. ನಮ್ಮ ಪೂರ್ವಾಪರಗಳನ್ನು ವಿಚಾರಿಸಿಯೇ ಆ ಗುರುತಿನ ಚೀಟಿಗಳನ್ನು ಮಾಡಲಾಗಿದೆ. ಈ ಗುರುತಿನ ಚೀಟಿಗಳನ್ನು ಬಳಸಿಕೊಂಡೇ ಲಾಗಾಯ್ತಿನಿಂದಲೂ ಎಲ್ಲ ಆಗುಹೋಗುಗಳು ನಡೆದಿವೆ.

ಈಗ ಆ ಗುರುತಿನ ಚೀಟಿಗಳನ್ನು ಮೀರಿ ಹೊಸದೊಂದು ಗುರುತನ್ನು ಸಾಬೀತು ಪಡಿಸಬೇಕು ಎಂದರೆ, ಹಳೆಯ ದೃಢೀಕರಣಗಳೆಲ್ಲ ಅಕ್ರಮ ಎಂದು ಅರ್ಥವೇ? ಮತದಾರರ ಚೀಟಿಯನ್ನು ಬಳಸಿ, ಭಾರತೀಯ ಪ್ರಜೆಯಾಗಿ ನಾವು ಮಾಡಿರುವ ಮತದಾನವೂ ಅಸಿಂಧುವಾಗುತ್ತದೆಯೇ?

6. ಈ ಪೌರತ್ವ ನೋಂದಣಿಯನ್ನು ಸಮರ್ಥವಾಗಿ ಮಾಡುವ ಸಾಮರ್ಥ್ಯ ಸರ್ಕಾರಕ್ಕೆ ಇದೆಯಾ?

ಇದೊಂದು ಅತ್ಯಂತ ಬೃಹತ್ ಕಾರ್ಯವಾಗಿದ್ದು, ತಪ್ಪುಗಳಿಲ್ಲದಂತೆ ಈ ಕಾರ್ಯ ಮಾಡುವ ಸಾಮರ್ಥ್ಯ ಸಧ್ಯದಲ್ಲಿ ಭಾರತ ಸರ್ಕಾರಕ್ಕೆ ಖಂಡಿತ ಇಲ್ಲ. ಈಗಲೇ ನಮ್ಮ ಸರ್ಕಾರಿ ದಾಖಲೆಗಳಲ್ಲಿ ಅನೇಕ ತಪ್ಪುಗಳಿರುವುದು ಹಾಗೂ ಅದರಿಂದ ಕಷ್ಟಕ್ಕೆ ಸಿಲುಕುವುದು ಭಾರತೀಯರೆಲ್ಲರ ಅನುಭವವಾಅಗಿದೆ.

ಒಂದೊಂದು ದಾಖಲೆಯಲ್ಲಿ ಒಂದೊಂದು ರೀತಿಯಲ್ಲಿ ಹೆಸರು ಬರೆಯಲಾಗುತ್ತದೆ. ಅದನ್ನು ಸರಿಪಡಿಸಲು ಮತ್ತೆ ಅಲೆದಾಟ ಮಾಡಬೇಕು. ಆಗಲೂ ಸರಿಯಾಗದೆ ಜನರು ಪರದಾಡಿರುವ ಸತ್ಯ ನಮಗೆಲ್ಲ ಗೊತ್ತಿದೆ. ಹೀಗಿರುವಾಗ 134 ಕೋಟಿ ಜನರ ದಾಖಲೆಗಳನ್ನು ತಪ್ಪಿಲ್ಲದೆ ಮಾಡುವ ಸಾಮರ್ಥ್ಯ ಸರ್ಕಾರಕ್ಕೆ ಇದೆಯಾ?

ಮತ್ತೆ ಅಸ್ಸಾಂನ ಉದಾಹರಣೆಯನ್ನೇ ತೆಗೆದುಕೊಂಡರೆ, ಸಾಕೆನ್ ಆಲಿ ಎನ್ನುವವರ ದಾಖಲೆಗಳಲ್ಲಿ ಕೆಲವು ಕಡೆ ಇಂಗ್ಲೀಷಿನ 'ಎಚ್' ಅಕ್ಷರ ಇತ್ತು. ಕೆಲವು ದಾಖಲೆಗಳಲ್ಲಿ 'ಎಚ್' ಅಕ್ಷರ ಇರಲಿಲ್ಲ. ಹಾಗಾಗಿ ಅವರ ದಾಖಲೆಗಳು ಅಕ್ರಮ ಎಂದು ಘೋಷಿಸಿ ಅವರನ್ನು ಬಂಧನ ಕೇಂದ್ರಕ್ಕೆ ತಳ್ಳಲಾಯಿತು. ಐದು ವರ್ಷಗಳ ಬಳಿಕ ಬಿಡುಗಡೆಯಾದರು. ಹೀಗೇ ದಾಖಲೆಗಳಲ್ಲಿ ಸಣ್ಣ ತಪ್ಪುಗಳಿದ್ದ ಕಾರಣ ಬಂಧನ ಕೇಂದ್ರದಲ್ಲಿ ಇದ್ದ ಸುಬ್ರೊತೊ ಡೆ, ಬಂಧನದಲ್ಲಿ ಇರುವಾಗಲೇ ಸಾವನ್ನಪ್ಪಿದರು. ಅವರಿಗೆ ತಾವು ಭಾರತೀಯ ಎಂಬ ಹೆಮ್ಮೆಯಲ್ಲಿ ಸಾಯಲೂ ಬಿಡಲಿಲ್ಲ. ಭಾರತದ 5ನೇ ರಾಷ್ಟ್ರಪತಿಗಳಾಗಿದ್ದ ಫಕ್ರುದ್ದೀನ್ ಆಲಿ ಅಹಮದ್ ಅವರ ಕುಟುಂಬಸ್ಥರನ್ನೂ ಎನ್ಆರ್ಸಿಯಿಂದ ಹೊರಗಿಡಲಾಗಿದೆ. ಕಾರ್ಗಿಲ್ ಯುದ್ಧದಲ್ಲಿ ಹೋರಾಡಿದ ವೀರ ಸೇನಾ ಅಧಿಕಾರಿ ಮೊಹಮದ್ ಸನಾವುಲ್ಲಾ ಅವರನ್ನೂ ಬಂಧನ ಕೇಂದ್ರಕ್ಕೆ ತಳ್ಳಲಾಗಿತ್ತು. ಈಗ ಸದ್ಯ ಅವರು ಜಾಮೀನಿನ ಮೇಲೆ ಹೊರಗೆ ಬಂದಿದ್ದಾರೆ. ಕೆಲವು ಮನೆಗಳಲ್ಲಿ ತಂದೆ ಮತ್ತು ಮಕ್ಕಳು ಭಾರತೀಯರು ಆದರೆ ತಾಯಿ ಭಾರತೀಯರಲ್ಲ ಎಂದು ಘೋಷಿಸಲಾಗಿದೆ.

7. ಅಕಸ್ಮಾತ್ ನಿಮ್ಮನ್ನು ಈ ಪಟ್ಟಿಯಿಂದ ಹೊರಗಿಟ್ಟರೆ ಏನಾಗುತ್ತದೆ?
ಮತ್ತೆ ಅಸ್ಸಾಂನ ಉದಾಹರಣೆಗೆ ಮರಳೋಣ. ಎನ್ಆರ್ಸಿಯಲ್ಲಿ ದಾಖಲೆ ಸರಿ ಇಲ್ಲ ಎಂದ ಲಕ್ಷಾಂತರ ಜನರನ್ನು 'ವಿದೇಶೀ ನುಸುಳುಕೋರರು' ಎಂಬ ಅನುಮಾನದಲ್ಲಿ ನೋಡಲಾಯಿತು. ಇವರುಗಳು ಮತ್ತೆ 'ವಿದೇಶೀಯರ ನ್ಯಾಯಾಧಿಕರಣ'ದ ಮುಂದೆ ಹಾಜರಾಗುವಂತೆ ಸೂಚಿಸಲಾಯಿತು. ಈ ನ್ಯಾಯಾಧೀಕರಣದ ತನಿಖೆಗಳನ್ನು ಗೌಪ್ಯವಾಗಿ ನಡೆಸಲಾಯಿತು. ಮಾಧ್ಯಮದವರಿಗಾಗಲಿ, ವ್ಯಕ್ತಿಯ ಸಂಬಂಧಿಕರಿಗಾಗಲಿ ಹಾಗೂ ಸಾರ್ವಜನಿಕರಿಗಾಗಲಿ ತನಿಖೆಯ ಸಂದರ್ಭದಲ್ಲಿ ಪ್ರವೇಶ ಇರಲಿಲ್ಲ. ಅವರು ತೆಗೆದುಕೊಳ್ಳುವ ತೀರ್ಮಾನವೇ ಅಂತಿಮವಾಗಿದ್ದು, ಅದು ಪಾರದರ್ಶಕವಾಗಿಲ್ಲ.

ಈ ಪ್ರಕ್ರಿಯೆಯು ವರ್ಷಗಟ್ಟಲೆ ನಡೆಯಬಹುದು ಇಲ್ಲವೇ ತರಾತುರಿಯಲ್ಲಿ ಮುಗಿಯಲೂ ಬಹುದು. ಈ ನ್ಯಾಯಾಧೀಕರಣವು ನಿಮ್ಮನ್ನು 'ಅಕ್ರಮ ವಲಸಿಗ' ಎಂದು ತೀರ್ಮಾನಿಸಿದಲ್ಲಿ ನಿಮ್ಮನ್ನು ಬಂಧನ ಕೇಂದ್ರಗಳಿಗೆ ಕಳಿಸಲಾಗುತ್ತದೆ.

ಈಗಾಗಲೇ ಕರ್ನಾಟಕ ರಾಜ್ಯ ಸರ್ಕಾರವು ಘೋಷಿಸಿರುವಂತೆ ನೆಲಮಂಗಲ ಸಮೀಪದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್ ಒಂದನ್ನು ಬಂಧನ ಕೇಂದ್ರವಾಗಿ ಮಾರ್ಪಾಡು ಮಾಡಲಾಗಿದೆ. ರಾಜ್ಯದ ಗೃಹಸಚಿವರು ಹೇಳಿರುವಂತೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಇಂತಹ ಕೇಂದ್ರಗಳು ತಲೆಎತ್ತಲಿವೆ.

ಈ ಬಂಧನ ಕೇಂದ್ರಗಳ ಪರಿಸ್ಥಿತಿ ಜೈಲಿಗಿಂತ ಹೆಚ್ಚೇನು ಭಿನ್ನವಾಗಿರುವುದಿಲ್ಲ. ಕುಟುಂಬಗಳಿಂದ ಪ್ರತ್ಯೇಕಗೊಂಡು, ಮರು ವಿಚಾರಣೆಯ ಅವಕಾಶಗಳಿಲ್ಲದೆ, ಸರ್ಕಾರ ಯಾವ ಕ್ರಮ ತೆಗೆದುಕೊಳ್ಳುತ್ತದೆಯೋ ಎಂದು ಕಾಯುತ್ತಾ ಇರಬೇಕಾಗುತ್ತದೆ. ಬಾಂಗ್ಲಾದೇಶದ ಅಕ್ರಮ ವಲಸಿಗರು ಎಂದು ಹಣೆಪಟ್ಟಿ ಕಟ್ಟಿರುವ 70 ವರ್ಷದ ಪರ್ಬತಿ ದಾಸ್ ಅವರು ಹಲವು ವರ್ಷಗಳಿಂದ ಹೀಗೇ ಕಾಯುತ್ತಾ ಇದ್ದಾರೆ. ಇವರಿಗೆ ಬಿಡುಗಡೆ ಹೇಗೆ ಎನ್ನುವುದೇ ಗೊತ್ತಿಲ್ಲ. ಯಾಕೆಂದರೆ ಬಾಂಗ್ಲಾದೇಶದ ವಲಸಿಗರನ್ನು ಹಿಂದಕ್ಕೆ ಕಳಿಸಲು ಬಾಂಗ್ಲಾದೇಶದ ಜೊತೆಗೆ ಒಪ್ಪಂದವೇ ಆಗಿಲ್ಲ. ಹಾಗೂ, ಅಸಲಿಗೆ ಪರ್ಬತಿ ದಾಸ್ ಬಾಂಗ್ಲಾದೇಶದವರೇ ಅಲ್ಲ. ಆಕೆ ಭಾರತೀಯರು.

## ರಾಷ್ಟ್ರೀಯ ಜನಸಂಖ್ಯೆ ನೋಂದಣಿ (ಎನ್‌ಪಿಆರ್)

ಎನ್ಆರ್ಸಿಗೆ ಮೊದಲು ಎನ್‌ಪಿಆರ್ ಎನ್ನುವ ಮತ್ತೊಂದು ತಲೆ ಎಣಿಸುವ ಪ್ರಕ್ರಿಯೆ ಮಾಡುತ್ತೇವೆ ಎಂದು ಹೇಳಿದೆ ಕೇಂದ್ರ ಸರ್ಕಾರ. 2020ರ ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ ನಡೆಯಲಿರುವ ಈ ಗಣತಿಯನ್ನು ಎನ್ಆರ್ಸಿಗೆ ಆಧಾರವಾಗಿ ಪರಿಗಣಿಸಲಾಗುತ್ತದೆಯಂತೆ. ಈ ಗಣತಿಯ ನಂತರ ಹೆಸರುಗಳ ಪಟ್ಟಿಯನ್ನು ಬಿಡುಗಡೆ ಮಾಡಲಾಗುತ್ತದೆ. ಇದರಲ್ಲಿ ಯಾರ ಹೆಸರುಗಳು ಇರುವುದಿಲ್ಲವೋ ಅವರು ಜಿಲ್ಲಾ ಮ್ಯಾಜಿಸ್ಟ್ರೇಟರ ಮುಂದೆ ಮತ್ತೆ ತಮ್ಮ ದಾಖಲೆಗಳನ್ನು ಮಂಡಿಸಬೇಕು. ನೀವು ಭಾರತೀಯರೋ ಅಲ್ಲವೋ ಎನ್ನುವುದನ್ನು ಅವರು ತೀರ್ಮಾನ ಮಾಡುತ್ತಾರೆ.

ಇವರು ಕೇಳುವ ದಾಖಲೆಗಳು ಯಾವುವು? ಎಷ್ಟು ವರ್ಷ ಹಳೆಯದು ಅಥವಾ ಹೊಸತಾಗಿರಬೇಕು? ಒಂದು ಕುಟುಂಬದಲ್ಲಿ ಯಾರದೆಲ್ಲ ದಾಖಲೆಗಳನ್ನು ಸಿದ್ಧಮಾಡಿಟ್ಟುಕೊಳ್ಳಬೇಕು? ಇತ್ಯಾದಿ ಪ್ರಶ್ನೆಗಳಿಗೆ ಸರ್ಕಾರದಲ್ಲಿ ಮತ್ತು ಅಧಿಕಾರಿಗಳಲ್ಲಿ ಸಮರ್ಪಕವಾದ ಉತ್ತರವಿಲ್ಲ. ಯಕೆಂದರೆ ಅವರಿಗೂ ಗೊತ್ತಿಲ್ಲ. ಯಾಕೆಂದರೆ ಸರ್ಕಾರ ಈ ನಿಯಮಗಳನ್ನು, ವಿಧಾನಗಳನ್ನು ರೂಪಿಸಿಯೇ ಇಲ್ಲ.

ನೋಟು ಬಂಧಿ ಮತ್ತು ಜಿಎಸ್‌ಟಿಗೆ ಮಾಡಿದಂತೆ ಸರ್ಕಾರವು ಯಾವುದೇ ಸಿದ್ಧತೆ ಇಲ್ಲದೆ, ತರಾತುರಿಯಲ್ಲಿ ಕಾಯಿದೆಯನ್ನು ತಂದಿದೆ. ಅದನ್ನು ಜಾರಿ ಮಾಡಲೂ ಆತುರ ತೋರಿಸುತ್ತಿದೆ.

ಯಾರು ಭಾರತೀಯರು?
ಯಾರು ಭಾರತೀಯರು ಎನ್ನುವುದನ್ನು ನಿರ್ಧರಿಸುವವರು ಯಾರು? ಕೆಲವು ಕಾಗದ ಪತ್ರಗಳೇ? ಅಥವಾ ನಿರ್ದಿಷ್ಟ ಧರ್ಮವೇ? ಅಥವಾ ನಾವು ಯಾವ ರಾಜಕೀಯ ಪಕ್ಷಕ್ಕೆ ಸೇರಿದ್ದೀವಿ ಎನ್ನುವುದೇ? ನಾವು ಭಾರತೀಯರು ಎನ್ನಲು ಇರುವ ಮಾನದಂಡ ಯಾವುದು?

ಒಂದೆರಡು ಮೈಲಿಗಳ ಅಂತರದಲ್ಲೇ ಭಾಷೆ, ಊಟ, ಬಣ್ಣಗಳೆಲ್ಲ ಭಿನ್ನವಾಗಿ ಇರುವಂತಹ ಅಪಾರ ವೈವಿಧ್ಯತೆಯ ಈ ಭಾರತದಲ್ಲಿ ಭಾರತೀಯತೆ ಎನ್ನುವುದನ್ನು ಯಾವುದೇ ನಿರ್ದಿಷ್ಟ ಚೌಕಟ್ಟಿನೊಳಗೆ ಬಂಧಿಸಲು ಆಗುವುದಿಲ್ಲ. ಯಾವುದೇ ಒಂದು ವಿಚಾರ, ಒಂದು ವ್ಯಾಖ್ಯಾನ, ಒಂದು ಲಕ್ಷಣ ಭಾರತೀಯತೆಯನ್ನು ನಿರ್ಧರಿಸಲು ಆಗುವುದಿಲ್ಲ. ಅದೊಂದು ಜಗದಗಲ ಹರಡಿಕೊಂಡ ಆಲ.


**ಸಂಪರ್ಕ ಮಾಹಿತಿ:**

**ಇಮೇಲ್ : info@cjp.org.in| ದೂರವಾಣಿ: +91 7506661171**

**ಟ್ವಿಟ್ಟರ್: @cjpindia | ಇನ್‌ಸ್ಟಾಗ್ರಾಂ: @cjpindia**

**ಫೇಸ್‌ಬುಕ್: facebook.com/cjpindia**